**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 20.06.2021.**

**1] ಸಿಂದಗಿ ಪೊಲೀಸ ಠಾಣೆ ಗುನ್ನೆ ನಂ: 169/2021 ಕಲಂ: 279, 304 (ಎ) ಐಪಿಸಿ**

ದಿನಾಂಕ 19.06.2021 ರಂದು 1830 ಗಂಟೆಗೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಅನ್ವರ ತಂ. ಶರೀಫ್ ಮನಿಯಾರ ಸಾ॥ ಜೇರಟಗಿ. ಟಂ.ಟಂ.ನಂ; ಕೆಎ:32 ಬಿ:1107 ನೇದ್ದರ ಚಾಲಕ. ಈತನು ತಾನು ನಡೆಸುತ್ತಿದ್ದ ಟಂಟಂ ವನ್ನು ಕಲಬುರ್ಗಿ, ಸಿಂದಗಿ, ವಿಜಯಪುರ ಎನ್.ಎಚ್-50 ಡಾಂಬರ ರಸ್ತೆಯ ಮೇಲೆ, ಮೊರಟಗಿ ದಾಟಿ 1 ಕೆ.ಎಮ್. ಅಂತರದ ಮೇಲೆ. ಅತೀ ಜೋರಿನಿಂದ ಬಂದು ಮೊಟಾರು ಸೈಕಲಕ್ಕೆ ಹಾಯಿಸಿ ಅಪಘಾತ ಪಡಿಸಿದ್ದು ಅಪಘಾತದಲ್ಲಿ, ತಲೆಗೆ, ಭಾರಿ ಪಡಿಸಿ 108 ಅಂಬ್ಯಲನ್ಸಕ್ಕೆ ಕರೆ ಮಾಡಿ ಅದರಲ್ಲಿ ಹಾಕಿಕೊಂಡು ಜೇರಟಗಿ ಸರಕಾರಿ ಆಸ್ಪತ್ರೆಗೆ ತಂದು ದಾಖಲು ಮಾಡಿ ಅಲ್ಲಿಂದ ಹೆಚ್ಚಿನ ಉಪಚಾರ ಕುರಿತು ಜೇವೂರಗಿ ತಾಲೂಕಾ ಆಸ್ಪತ್ರೆಗೆ ದಾಖಲು ಮಾದೇವು ಮುಂದೆ ಯುನಿಟೆಡ್ ಆಸ್ಪತ್ರೆ ಕಲಬುರ್ಗಿಗೆ ತಂದು ದಾಖಲು ಮಾಡಿದೇವು. ಉಪಚಾರ ಹೊಂದುವಾಗ ಸದಾನಂದ ತಂ. ಭೀಮರಾಯ ನಾಯ್ಕೋಡಿ ತಗೆದುಕೊಂಡು ಪರ್ತ ನಮ್ಮೂರಿಗೆ ತರುವಾಗ ಜೇವೂರಗಿ ದಾಟಿ ನೇದಲಗಿ ಸಮೀಪ ದಾರಿಯಲ್ಲಿ 6.00 ಗಂಟೆಗೆ ಮೃ ಆಗಿದ್ದು ಅದೆ. ಈ ಬಗ್ಗೆ ದಯಾನಂದ ಬಲವಂತರಾಯ ತಳವಾರ. ಸಾ: ಕುರನಳ್ಳಿ ತಾಲೂಕ; ಜೇವೂರಗಿ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 19.06.2021 ರಂದು ಸಿಂದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 106/2021 ಕಲಂ: 323, 324, 447, 307, 504, 506 ರೆ/ವು 34 ಐಪಿಸಿ**

ದಿನಾಂಕ 19.06.2021 ರಂದು 1930 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಶಿವನಿಂಗಪ್ಪ ಶಿವಗೊಂಡಪ್ಪ ಅವಜಿ 2] ಅನೀಲ ಶಿವಗೊಂಡಪ್ಪ ಅವಜಿ 3] ಸೋಮನಾಥ ಶಿವಗೊಂಡಪ್ಪ ಅವಜಿ 4] ಸಂಜುವ ಶಿವಗೊಂಡಪ್ಪ ಅವಜಿ ಸಾ: ಎಲ್ಲರೂ ನಾದ ಬಿಕೆ ಫಿರ್ಯಾದಿದಾರ ಮತ್ತು ಆರೋಪಿತರು ಜಮೀನಗಳು ಒಂದಕ್ಕೊಂದು ಹೊಂದಿ ಇದ್ದು ಈ ಜಮೀನದ ಬಾಂದಿನ ಸಲುವಾಗಿ ಫಿರ್ಯಾದಿ ಮತ್ತು ಆರೋಪಿತರಿಗೆ ಬಾಯಿ ಆಗುತ್ತಾ ಬಂದಿದ್ದು ಇರುತ್ತದೆ. ಈ ದಿವಸ ದಿನಾಂಕ:19.06.2021 ರಂದು ಮುಂಜಾನೆ 06:00 ಗಂಟೆಯ ಸುಮಾರಿಗೆ ಫಿರ್ಯಾದಿಯು ತನ್ನ ಹೊಲ ಬಿತ್ತುವ ಸಲುವಾಗಿ ಹಸನು ಮಾಡಲು ಹೊಲಕ್ಕೆ ಹೋಗಿ ತನ್ನ ಬಾಂದಿನ ಹತ್ತಿರ ಮುಳ್ಳು ಕಂಟಿಗಳನ್ನು ಕಡಿದು ಸುಡಲಿಕ್ಕೆ ಹತ್ತಿದಾಗ ಅದೇ ಸಮಯದಲ್ಲಿ ಫಿರ್ಯಾದಿಯ ಜಮೀನದ ಬಾಜು ಫಿರ್ಯಾದಿಯ ಜಮೀನದಲ್ಲಿ ಅಕ್ರಮ ಪ್ರವೇಶ ಮಾಡಿ ಆರೋಪಿ ಶಿವನಿಂಗಪ್ಪ ಅವಜಿ ಈತನು ಲೇ ಬೋಸಡಿ ಮಗನೆ ನಿನಗೆ ಎಷ್ಟು ಸಲ ಹೇಳಿದರು ಕೇಳಲ್ಲ ನಮ್ಮ ಬಾಂದಿನ ಹತ್ತಿರ ನೀನು ಬರಬೇಡಾ ಅಂದಾಗ ಆಗ ಫಿರ್ಯಾದಿಯು ನಮ್ಮ ಹೊಲದ ಬಾಂದಿನ ಕಡೆಗೆ ಇದ್ದೇನೆ ನಿಮ್ಮ ಹೊಲದಲ್ಲಿ ನಾನು ಬಂದು ಏನು ಮಾಡಲಿ ಅಂತಾ ಅಂದಿದ್ದಕ್ಕೆ ಆರೋಪಿ ಅನೀಲ ಅವಜಿ ಈತನು ನಿನ್ನ ಸೊಕ್ಕು ಬಹಳ ಆಗ್ಯಾದ ಸೂಳಿ ಮಗನೆ ಅಂದವನೇ ತನ್ನ ಬಲಗಾಲಿನಿಂದ ಜೋರಾಗಿ ಗುಪ್ತಾಂಗಕ್ಕೆ ಒದ್ದನ್ನು ಆಗ ಪಿರ್ಯಾದಿಯು ಕೆಳಗಡೆ ಬಿದ್ದಾಗ ಆಗ ಆರೋಪಿ ಸೋಮನಾಥ ಅವಜಿ ಈತನು ಈ ಮಗನಿಗೆ ಇವತ್ತು ಜೀವ ಸಹಿತ ಬಿಡಬ್ಯಾಡ ಅಂದವನೇ ಫಿರ್ಯಾದಿಯ ಎದೆಯ ಮೇಲೆಕುಳಿತು ಕೊಲೆ ಮಾಡು ಉದ್ದೇಶದಿಂದ ತನ್ನ ಎರಡು ಕೈಗಳಿಂದ ಫಿರ್ಯಾದಿಯ ಕುತ್ತಿಗೆಗೆ ಬಲವಾಗಿ ಒತ್ತಿ ಹಿಡಿದು ಉಸಿರು ನಿಲ್ಲಿಸುವ ಪ್ರಯತ್ನ ಮಾಡುತ್ತಿದ್ದಾಗ ಆಗ ಆರೋಪಿ ಸಂಜುವ ಅವಜಿ ಈತನು ತನ್ನ ಕೈಯಲ್ಲಿದ್ದ ಬಡಿಗೆಯಿಂದ ಕಾಲುಗಳಿಗೆ ಹೊಡೆದು ಎಲ್ಲರೂ ಸೇರಿಕೊಂಡು ಇವತ್ತು ಇವನಂದು ಕತಿ ಮುಗಿಸಿ ಬಿಡೋಣ ಅಂತಾ ಜೀವದ ಬೇದರಿಕೆಯನ್ನು ಹಾಕಿದ ಅಪರಾಧ. ಈ ಬಗ್ಗೆ ಗಣಪತಿ ದಶರಥ ಗೂಂದಳಿ ಸಾ: ನಾದ ಬಿಕೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 19.06,2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಮುದ್ದೇಬಿಹಾಳ ಪೊಲೀಸ ಠಾಣೆ ಗುನ್ನಾ. ನಂ: 104/2021 ಕಲಂ: ಮಹಿಳೆ ಕಾಣೆ.**

ದಿನಾಂಕ 12.06.2021 ರಂದು 10.00 ಗಂಟೆಯಿಂದ 13.30 ಗಂಟೆಯ ನಡುವಿನ ಅವಧಿಯಲ್ಲಿ. ಇದರಲ್ಲಿ ಕಾಣೆಯಾದ ಶಿಲ್ಪಾ ತಂದೆ ಹಣಮಂತ ವಾಲಿಕಾರ ವಯಾ 21 ವರ್ಷ ಉದ್ಯೋಗ ಶಿಕ್ಷಣ ಜಾತಿ ಹಿಂದು ಬೇಡರ ಸಾ: ವನಹಳ್ಳಿ ಹಾ ವ ಮುದ್ದೇಬಿಹಾಳ ಹೊರಪೇಟಿ ಗಲ್ಲಿ ಇವಳು ತಮ್ಮ ಮನೆಯಿಂದ ಮನೆಯಲ್ಲಿ ಯಾರು ಇಲ್ಲದ ವೇಳೆಯಲ್ಲಿ ನಮ್ಮ ಮನೆಯಿಂದ ಎಲ್ಲಿಗೋ ಹೋಗಿ ಕಾಣೆಯಾಗಿದ್ದು ಇರುತ್ತದೆ. ಈ ಬಗ್ಗೆ ಜಯಮ್ಮ ಗಂಡ ಹಣಮಂತ ವಾಲಿಕಾರ ವಯಾ 45 ವರ್ಷ ಉದ್ಯೋಗ ಅಂಗನವಾಡಿ ಆಯಾ ಕೆಲಸ ಜಾತಿ ಹಿಂದು ಬೇಡರ ಸಾ: ಮುದ್ದೇಬಿಹಾಳ ಹೊರಪೇಟಿಗಲ್ಲಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 19.06,2021 ರಂದು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.